

# ಫ್ಯಾಷನ್‌ಪ್ರಿಯರ ಅಚ್ಚುಮೆಚ್ಚು ಆರ್ಗಾಂಝಾ ಲೆಹೆಂಗಾ

ಲೆಹೆಂಗಾ ಫ್ಯಾಷನ್ ಲೋಕಕ್ಕೆ ಕಾಲಿಟ್ಟು ಹಲವು ವರ್ಷಗಳೇ ಆಗಿವೆ. ಆದರ ಸುಧಾರಿತ ರೂಪ, ಫ್ಯಾಷನಬಲ್ ಆಗಿರುವ ಆರ್ಗಾಂಝಾ ಲೆಹೆಂಗಾ ಇದೀಗ ಟ್ರೆಂಡಿಂಗ್‌ನಲ್ಲಿದೆ.

■ ಆಶಾ ಎಸ್. ಕುಲಕರ್ಣಿ

ಆರ್ಗಾಂಝಾ ಲೆಹೆಂಗಾ ಫ್ಯಾಷನ್‌ಪ್ರಿಯ ಮಹಿಳೆಯರನ್ನು ಸೆಳೆಯಲಾರಂಭಿಸಿದೆ. ಮೊದ ಮೊದಲು ಬರೀ ಸಿಂಗಲ್ ಕಲರ್‌ನಲ್ಲಿ ಸಿಗುತ್ತಿದ್ದ ಲೆಹೆಂಗಾಗಳು ಇದೀಗ ಮಲ್ಟಿಕಲರ್, ಮಿರರ್ ವರ್ಕ್, ಚಮ್ಕಿ, ಲೇಸ್ ವರ್ಕ್... ಹೀಗೆ ನಾನಾ ವಿನ್ಯಾಸಗಳಲ್ಲಿ ಮಾರುಕಟ್ಟೆಗೆ ಬಂದಿವೆ. ಈ ಲೆಹೆಂಗಾಗಳು ಕಾಲೇಜು ಹುಡುಗಿಯರನ್ನು ಮಾತ್ರವಲ್ಲ, ಎಲ್ಲ ವಯೋಮಾನದ ಮಹಿಳೆಯರನ್ನೂ ಸೂಜಿಗಲ್ಲಿನಂತೆ ಸೆಳೆಯುತ್ತಿವೆ. ಇದರಲ್ಲಿ ಆಧುನಿಕ ಹಾಗೂ ಸಾಂಪ್ರದಾಯಿಕ ಎರಡೂ ತರಹದ ಲೆಹೆಂಗಾಗಳು ಲಭ್ಯ.

ಲೆಹೆಂಗಾಗಳನ್ನು ಸಾಮಾನ್ಯವಾಗಿ ಮದುವೆ, ಮುಂಜಿ, ಗ್ರಹಪ್ರವೇಶದಂತಹ ಸಮಾರಂಭಗಳಿಗೆ, ಸಂಜೆಯ ಗ್ರ್ಯಾಂಡ್ ಪಾರ್ಟಿಗಳಿಗೆ ಮಾತ್ರವೇ ಬಳಸಲಾಗುತ್ತಿತ್ತು. ರೇಷ್ಮೆ ಬಟ್ಟೆಯಲ್ಲಿ ದೊಡ್ಡದಾದ ಬಾರ್ಡರ್, ಒಡಲಲ್ಲಿ ಬುಟ್ಟಾಗಳನ್ನು ಹೊಂದಿದ ಲೆಹೆಂಗಾದ ಮೇಲೆ ಡಿಸೈನರ್ ಬ್ಲೌಸ್ ತೊಟ್ಟುಕೊಳ್ಳುವುದು ರೂಢಿಯಲ್ಲಿತ್ತು. ನಂತರ ಗ್ರಾಹಕರ ಅಭಿರುಚಿಗೆ ಅನುಗುಣವಾಗಿ ಈ ಲೆಹೆಂಗಾಗಳು ಅಪ್‌ಡೇಟ್ ಆಗತೊಡಗಿದವು. ಉತ್ತರ ಭಾರತದಲ್ಲಿ ಮದುವೆ ಸಮಾರಂಭಗಳಲ್ಲಿ ಸಾಂಪ್ರದಾಯಿಕ ಉಡುಪಾಗಿ ಈ ಲೆಹೆಂಗಾಗಳನ್ನೇ ಬಳಸುವುದಿದೆ. ಈಗ ಆರ್ಗಾಂಝಾ ಲೆಹೆಂಗಾ ಗ್ರ್ಯಾಂಡ್ ಲುಕ್ ನೀಡುವ ಕಾರಣ ಫ್ಯಾಷನ್‌ಪ್ರಿಯರ ಚಿತ್ತ ಇದರತ್ತ ಹರಿದಿದೆ.

ಆರ್ಗಾಂಝಾ ಲೆಹೆಂಗಾಗಳ ಮೇಲೆ ಜರಿ ವರ್ಕ್, ಜರ್ದೋಸಿ ವರ್ಕ್, ಕುಂದನ್, ಹ್ಯಾಂಡ್ ವರ್ಕ್, ಚಮ್ಕಿ, ಚಿಲ್ಮಿಲಿ ವರ್ಕ್ ಇರುವಂಥವು ಸಖತ್ ಲುಕ್ ಕೊಡುತ್ತವೆ. ಆದರೆ ಇದು ಬಹಳ ದುಬಾರಿ. ಹೀಗಾಗಿ ವಸ್ತ್ರವಿನ್ಯಾಸಕಾರರು ಇದೇ ಉಡುಪನ್ನು ಸಾಮಾನ್ಯ ಗ್ರಾಹಕರಿಗೂ ತಲುಪುವ ರೀತಿಯಲ್ಲಿ ವಿನ್ಯಾಸ ಮಾಡುವತ್ತ ಗಮನಹರಿಸಿದ್ದಾರೆ.

## ಏನಿದು ಆರ್ಗಾಂಝಾ?

ಆರ್ಗಾಂಝಾ ಎನ್ನುವುದು ರೇಷ್ಮೆ ಬಟ್ಟೆಯಿಂದ ತಯಾರಿಸುವ ಉಡುಗೆ. ಇದು ಯಾವುದೇ ಬಣ್ಣ ಅಥವಾ ಶೇಡ್‌ಗಳಲ್ಲಿ ಆಕರ್ಷಕವಾಗಿ ಕಾಣುತ್ತದೆ. ಈ ಬಟ್ಟೆಯಲ್ಲಿ ಡಿಜಿಟಲ್ ವಿನ್ಯಾಸವನ್ನೂ ಮಾಡಬಹುದು. ಕಂಪ್ಯೂಟರ್ ಡಿಸೈನ್‌ಗಳನ್ನೂ ಬಟ್ಟೆಯಲ್ಲಿ ತರಬಹುದು. ಫ್ಯಾಷನ್ ವಿನ್ಯಾಸಕರ ಕಲ್ಪನೆಯಲ್ಲಿ ಹಲವು ಚಿತ್ತಾರಗಳನ್ನು ಬಟ್ಟೆಯಲ್ಲಿ ಒಡಮೂಡಿಸಬಹುದು. ವಧುವಿಗೆ ರಿಸೆಪ್ಷನ್ ಸಮಯದಲ್ಲಿ ತೊಟ್ಟುಕೊಳ್ಳಲು ಸೂಕ್ತವಾಗಿದ್ದು ಸೊಬಗನ್ನು ಇಮ್ಮಡಿಸಲು ಸಹಕಾರಿ.

ಎಲಿಗೆಂಟ್ ಲುಕ್ ನೀಡುವ ಈ ಆರ್ಗಾಂಝಾ ಬಟ್ಟೆಯ ಮೇಲಿನ ಫ್ಲೋರಲ್ ವಿನ್ಯಾಸ ಎಲ್ಲರನ್ನೂ ಸೂಜಿಗಲ್ಲಿನಂತೆ ಸೆಳೆಯುತ್ತಿದೆ. ಸರಳ ಹಾಗೂ ಸುಂದರವಾಗಿರುವ ಈ ಬಟ್ಟೆಯಲ್ಲಿ ನೇಯ್ಗೆಯು ಎದ್ದು ಕಾಣುವಂತಿರುತ್ತದೆ. ಇದು ಧರಿಸುವವರ ವರ್ಚಸ್ಸನ್ನು ಹೆಚ್ಚುವಂತೆ ಮಾಡುತ್ತದೆ. ಬಟ್ಟೆಯ ಮೇಲಿನ ಗಾಢ ಬಣ್ಣದ ಹೂವಿನ ಚಿತ್ತಾರ ಮಹಿಳೆಯರನ್ನು